https://www.kuvempuonline.com

**Q.P. Code – 10237-A**

**ದ್ವಿತೀಯ ಸೆಮಿಸ್ಟರ್ ಬಿ.ಎ. ಪದವಿ ಪರೀಕ್ಷೆ, ನವೆಂಬರ್/ಡಿಸೆಂಬರ್ 2016**

**ಐಚ್ಛಿಕ ಕನ್ನಡ ಪತ್ರಿಕೆ – ೨**

**(SAB 430) ಸಾಹಿತ್ಯ ಸಂಕಥನ – ೨**

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 80*

1. (೧) ಒಂದು ಪದ್ಯ ಭಾಗದ ಭಾವ ಸ್ವಾರಸ್ಯವನ್ನು ಬರೆದು ವ್ಯಾಖ್ಯಾನಿಸಿ : **1 × 5 = 5**

ರಾಜ್ಯದ ಸಾಮ್ರಾಜ್ಯದ ತೆನೆಒಕ್ಕಿ
ಮಂಡಲ – ಗಿಂಡಲಗಳ ಗಡ ಮುಕ್ಕಿ
ತೇಲಿಸಿ ಮುಳಗಿಸಿ ಖಂಡ – ಖಂಡಗಳ
ಸಾರ್ವಭೌಮರಾ ನೆತ್ತಿಯಾ ಕುಕ್ಕಿರಾ
ಹಕ್ಕಿ ಹಾರುತಿದೆ ನೋಡಿದಿರಾ?

(೨) ಒಳಗೊಳಗೆ ಬೇರು ಕೊಯ್ದು
ಲೋಕದೆದುರಿನಲ್ಲಿ ನೀರು ಹೊಯ್ದು
ನನ್ನ ಸಲಹುವ ನಿಮ್ಮ ಕಪಟ ಗೊತ್ತಿದ್ದರೂ
ಗೊತ್ತಿಲ್ಲದಂತೆ ನಟಿಸಿ
ಚಕಾರವೆತ್ತದೆ ನಿಮ್ಮೊಡನೆ ಕಾಫಿ ಹೀರಿ
ಪೇಪರೋದಿ ಹರಟಿ
ಬಾಳತಳ್ಳುವುದಿದೆ ನೋಡಿ
ಆದು ಬಲು ಕಷ್ಟದ ಕೆಲಸ

2. ಮೂರು ಕವಿಗಳ ಕುರಿತು ಟಿಪ್ಪಣಿ ಬರೆಯಿರಿ : **3 × 2 = 6**

(೧) ಬಿ.ಎಂ.ಶ್ರೀ

(೨) ಕುವೆಂಪು

(೩) ಎಂ.ಗೋಪಾಲಕೃಷ್ಣ ಅಡಿಗ

(೪) ಬಸವರಾಜ ಕಟ್ಟೀಮನಿ

(೫) ಡಾ. ಸಿದ್ಧಲಿಂಗಯ್ಯ

3. ಮೂರು ಪ್ರಶ್ನೆಗಳಿಗೆ ವಿಮರ್ಶಾತ್ಮವಾಗಿ ಉತ್ತರಿಸಿ : **3 × 5 = 15**

(೧) ಕನ್ನಡದ ಬಗೆಗಿನ ಅಭಿಮಾನ ಶ್ರೀ ರವರ 'ಕಾಣಿಕೆ' ಕವನದಲ್ಲಿ ಹೇಗೆ ವ್ಯಕ್ತವಾಗಿದೆ?

(೨) 'ಗಾಂಧೀಜೀಯವರ ವ್ಯಕ್ತಿತ್ವ ಮತ್ತು ಚಿಂತನೆಗಳು ಇಂದಿಗೂ ಸಮಕಾಲೀನವಾಗಿವೆ' 'ಕಣವಿ'ಯವರ ಕವಿತೆಯ ಹಿನ್ನಲೆಯಲ್ಲಿ ವಿಶ್ಲೇಷಿಸಿರಿ?

(೩) 'ಭಾಷಾ ವೈಶಿಷ್ಟ್ಯತೆ ಮತ್ತು ಸ್ವಾಭಿಮಾನದ ವಸ್ತು' ಈ ಹಿನ್ನಲೆಯಲ್ಲಿ ಕೋಳೀಕೇರಂಗಾ ಪದ್ಯವನ್ನು ವಿಶ್ಲೇಷಿಸಿರಿ.

(೪) ಪರಕೀಯತೆಯ ಭಾವನೆಯು 'ನಿಮ್ಮೊಡನಿದ್ದೂ ನಿಮ್ಮಂತಾಗದೆ' ಕವಿತೆಯಲ್ಲಿ ವ್ಯಕ್ತಗೊಂಡ ಬಗೆಯನ್ನು ವಿವರಿಸಿ?

(೫) ಸವತಿ ಮಾತ್ಸರ್ಯದ ಆಶಯವು 'ಶಿವನ ಮೀಸುವ ಹಾಡು' ಕವಿತೆಯಲ್ಲಿ ಹೇಗೆ ವ್ಯಕ್ತಗೊಂಡಿದೆ? ವಿವರಿಸಿ.



https://www.kuvempuonline.com
https://www.kuvempuonline.com
https://www.kuvempuonline.com

https://www.kuvempuonline.com

**Q.P. Code – 10237-A**

4. ಒಂದು ಕಥಾಭಾಗವನ್ನು ಅರ್ಥ ಕೆಡದಂತೆ 1/3 ಭಾಗಕ್ಕೆ ಸಂಕ್ಷೇಪಿಸಿ : **1 × 5 = 5**

(ಅ) ಗೇಣುದ್ದದ ಗರಿಕೆ, ಮಾರುದ್ದ ಬೇರು, ಕಳದಲ್ಲಿ ಆಗಿರುವುದು ಏನು? ರಾಗಿ ಹತ್ತು ಖಂಡುಗ ಬೆಳೆಯುವ ಕಡೆ ನಾಲ್ಕು ಖಂಡುಗ ಬೆಳೆದಿರುತ್ತದೆ. ಬೆಳೆಯನ್ನು ಭಾಗ ಮಾಡಿ ಈ ಕಡೆ ಒಂದು ಮುಕ್ಕಾಲು ಖಂಡುಗ ಆ ಕಡೆ ಒಂದು ಮುಕ್ಕಾಲು ಖಂಡುಗ, ಮಿಕ್ಕದರಲ್ಲಿ ಸ್ವಲ್ಪ ಬೀಜಕ್ಕೆ ಎಂತ ಬಿಟ್ಟು ಮಿಕ್ಕದರಲ್ಲಿ ದೇವರಿಗೆ, ದಿಂಡರಿಗೆ, ಬೇಡುವವರಿಗೆ ನೌಕರ, ಮಾನೇರಿಗೆ ಇಡಬೇಕು. ದೇವರು ಬಂದಿಲ್ಲವಲ್ಲ ಅವನ ಪಾಲು ಇಲ್ಲದಿದ್ದರೆ ಹೋಗಲಿ ಎನ್ನುವ ಹಾಗಿಲ್ಲ, ಪೂಜಾರಿ ಬಂದಿದ್ದಾನೆ. ದೇವರಿಗೆ ಕಮ್ಮಿ ಮಾಡಬೇಡಿ ಎಂದು ಬಹಳ ಶ್ರದ್ಧೆಯಿಂದ ಬುದ್ಧಿ ಹೇಳುತ್ತಾರೆ. ದಿಂಡರಿಗೆ ಇಲ್ಲದಿದ್ದರೆ ಹೋಗಲಿ, ಬೇಡುವವರಿಗೆ ಕೊಡಲೇಬೇಕು. ಕೊಡದೆ ಈದ್ದರೆ ಬೈದು ಕೊಂಡು ಹೋಗುವರು.

(ಆ) ನಾವು ನೋಡುತ್ತಿರುವ ಸಿನಿಮಾದಲ್ಲಿ ಮೂರನೆಯ ದೃಶ್ಯ ಇದು. ಗಿರಜಾ ಇನ್ನೂ ಕೊಂಚ ಕಣ್ತೆರದು ನೋಡು. ಮುಪ್ಪಿನ ಮುದುಕ ಈತ ಅರವತ್ತಕ್ಕೂ ಹೆಚ್ಚಾಗಿದ್ದೀತು ವಯಸ್ಸು. ಮೈಯಲ್ಲಿ ಶಕ್ತಿಯಾದರೂ ಇದೆಯಾ ಅವನಿಗೆ? ಅವನ ಕತ್ತಿನಲ್ಲಿ ನರಗಳಾದರೂ ಇವೆಯಾ? ಮೈಯಲ್ಲಿ ರಕ್ತವಾದರೂ ಇದೆಯಾ? ಆದರೂ ಆತ ಆ ಬುಟ್ಟಿ ಹೊತ್ತು ಕೊಂಡು ಆಭೀಕರ ಬಿಸಿಲಿನಲ್ಲಿ ತಿರುಗುತ್ತಾನೆ. ಊಟ ಮಾಡಿ ತಂಪಾದ ಸ್ಥಳದಲ್ಲಿ ಮಲಗಿಕೊಂಡು ವಿರಮಿಸುವ ಹೊತ್ತು ಇದು. ಇವನ ವಯಸ್ಸಿನ ಶ್ರೀಮಂತರೆಷ್ಟು ಜನ ಸೋಪಾಗಳ ಮೇಲೆ ಒರಗಿ ನಿದ್ರಿಸುತ್ತಿದ್ದಾರೋ, ಇವನು ಮಾತ್ರ ಹೊಟ್ಟೆಪಾಡಿಗಾಗಿ ಈ ಕಳ್ಳೇಕಾಯಿಯ ಕ್ಷುಲ್ಲಕ ವ್ಯಾಪಾರ ಮಾಡುತ್ತಾ ತಿರುಗ ಬೇಕಾಗಿದೆ. ದಿನವೆಲ್ಲಾ ಈ ರೀತಿ ತಿರುಗಿದರೆ ಅವನಿಗೆ ದೊರೆಯುವ ಲಾಭವಾದರೂ ಎಷ್ಟಿದ್ದೀತು ಅಂತಿಯಾ? ನಾಲ್ಕಾಣೆ ಐದಾಣೆ ಆದರೆ ಬಹಳ ಆಯಿತು. ಈ ಅಲ್ಪ ಲಾಭಕ್ಕಾಗಿ ಈ ಮುದುಕ ಪಡುತ್ತಿರುವ ಕಷ್ಟ ನೋಡಿದಿಯಾ? ಇಂಥಾ ಕಷ್ಟವೇ ಇವನಂಥಾ ಕೋಟ್ಯಾವಧಿ ಜನ ಮುದುಕರಿಗೂ ಇದೆ.

5. ಮೂರು ವಿಷಯಗಳನ್ನು ಕುರಿತು ಟಿಪ್ಪಣಿ ಬರೆಯಿರಿ : **3 × 2 = 6**

(೧) ಬಂಗಾರದ ಕೂದಲಿನ ತಂಗಿ

(೨) ಡಾ. ತಿಮ್ಮಪ್ಪ

(೩) ಅಸ್ಪೃಶ್ಯತೆ

(೪) ಅವ್ವ ಮತ್ತು ಕೌದಿ

(೫) ಕಾಲಪಕ್ಷಿ

6. ಮೂರು ಪ್ರಶ್ನೆಗಳಿಗೆ ವಿಮರ್ಶಾತ್ಮಕವಾಗಿ ಉತ್ತರ ಬರೆಯಿರಿ : **3 × 5 = 15**

(೧) ಪೂರ್ಣಸ್ವಾಮಿ ಅಯ್ಯಂಗಾರರು ತಮ್ಮ ಸುಳ್ಳಿನಲ್ಲಿ ತಾವೇ ಸಿಕ್ಕಿ ಕೊಂಡು ಒದ್ದಾಡುವ ಪರಿಯನ್ನು ಚಿತ್ರಿಸಿ.

(೨) ಬದುಕಿನ ಕಟು ವಾಸ್ತವತೆಯು ಗಿರಿಜಾ ಕಂಡ ಸಿನಿಮಾ ಕಥೆಯಲ್ಲಿ ಚಿತ್ರಣಗೊಂಡ ಬಗೆಯನ್ನು ವಿವರಿಸಿ.

(೩) ಪಿ.ಲಂಕೇಶರ 'ಮುಟ್ಟಿಸಿಕೊಂಡವನು' ಕಥೆಯ ಆಶಯವನ್ನು ವಿವರಿಸಿ.

(೪) ಆಧುನಿಕತೆಯ ಪ್ರವೇಶ ಮತ್ತು ಅದರ ಪರಿಣಾಮಗಳನ್ನು ದೇವನೂರರ 'ಡಾಂಬರು ಬಂದುದು' ಕಥೆ ಹೇಗೆ ಪ್ರಕಟಿಸಿದೆ?

(೫) ಧಾರ್ಮಿಕ ಶೋಷಣೆಯ ವಿರುದ್ಧ ಖತೀಜಾಬಿ ನಡೆಸಿದ ಹೋರಾಟವನ್ನು ಸಾರಾ ಅಬೂಬಕರ್‌ರವರ ಕಥೆ ಹೇಗೆ ಚಿತ್ರಿಸಿದೆ?



https://www.kuvempuonline.com
https://www.kuvempuonline.com
https://www.kuvempuonline.com

https://www.kuvempuonline.com



7. ಎರಡು ಪ್ರಶ್ನೆಗಳಿಗೆ ವಿಮರ್ಶಾತ್ಮಕವಾಗಿ ಉತ್ತರ ಬರೆಯಿರಿ : **2 × 7 = 14**

   (೧) ನೈತಿಕತೆ ಮತ್ತು ಅನೈತಿಕತೆಯ ಸೂಕ್ಷ್ಮತೆಯನ್ನು ಸೆರಗಿನ ಕೆಂಡ ನಾಟಕದ ಹಿನ್ನಲೆಯಲ್ಲಿ ಚರ್ಚಿಸಿ.

   (೨) ಲಲಿತಮ್ಮಳ (ಮೀನ) ಬದುಕು ಸೆರಗಿನ ಕೆಂಡದಂತಾಗಲು ಇರುವ ಕಾರಣ ಮತ್ತು ಪರಿಣಾಮವನ್ನು ಚರ್ಚಿಸಿ.

   (೩) 'ಲಲಿತಮ್ಮ' (ಮೀನ) ಮತ್ತು ಸರಸ್ವತಿಯ ಪಾತ್ರಗಳನ್ನು ನಾಟಕದ ಹಿನ್ನಲೆಯಲ್ಲಿ ವಿವೇಚಿಸಿ.

8. ಎರಡು ಪ್ರಶ್ನೆಗಳಿಗೆ ತರ್ಕಬದ್ಧವಾಗಿ ಉತ್ತರ ಬರೆಯಿರಿ : **2 × 7 = 14**

   (೧) ಆಧುನಿಕ ಕನ್ನಡ ಸಾಹಿತ್ಯದ ಹಿನ್ನೆಲೆ, ಪ್ರಭಾವ ಮತ್ತು ಪ್ರೇರಣೆ ಕುರಿತು ಸಂಕ್ಷಿಪ್ತವಾಗಿ ಬರೆಯಿರಿ.

   (೨) ನವ್ಯ ಸಾಹಿತ್ಯಕ್ಕೆ ಒದಗಿ ಬಂದ ಪ್ರೇರಣೆ, ಪ್ರಭಾವ ಮತ್ತು ಪ್ರಮುಖ ಕೃತಿಕಾರರನ್ನು ಕುರಿತು ಬರೆಯಿರಿ.

   (೩) ದಲಿತ – ಬಂಡಾಯ ಸಾಹಿತ್ಯ ಪರಂಪರೆಯನ್ನು ಕುರಿತು ಬರೆಯಿರಿ.

https://www.kuvempuonline.com

https://www.kuvempuonline.com



https://www.kuvempuonline.com